**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃರವರ ನ್ಯಾಯಾಲಯ, ಕೊಪ್ಪ</u>**

**<u>ಸಿ.ಸಿ. ನಂ.*593/2022*</u>**

**<u>ಪಿರ್ಯಾಧಿದಾರರು:</u>** ಸರ್ಕಾರದ ಪರವಾಗಿ ಕೊಪ್ಪ ಪೊಲೀಸರು.

**ವಿರುದ್ಧ**

| | | |
|---|---|---|
| ಆರೋಪಿತರು | 1 | ಕೆ.ಪಿ. ರಮೇಶ ಬಿನ್ ಲೇಟ್ ಪುಟ್ಟೇಗೌಡ, 66 ವರ್ಷ, ವ್ಯವಸಾಯ, ವಾಸ ಕೂಸಗೊಳ್ಳಿ, ಗುಣವಂತೆ, ಕೊಪ್ಪ ತಾಲ್ಲೂಕು. |
| | 2 | ಕೆ.ಪಿ. ಚನ್ನಪ್ಪ ಬಿನ್ ಲೇಟ್ ಪುಟ್ಟೇಗೌಡ, 72 ವರ್ಷ, ವ್ಯವಸಾಯ, ವಾಸ ಇಂದಿರಾನಗರ, ಕೊಪ್ಪ ಪಟ್ಟಣ ಮತ್ತು ತಾಲ್ಲೂಕು. |
| | 3 | ಶಿವಪ್ಪ ಬಿನ್ ಲೇಟ್ ಪುಟ್ಟೇಗೌಡ, 67 ವರ್ಷ, ವ್ಯವಸಾಯ, ವಾಸ ಕೂಸಗೊಳ್ಳಿ, ಗುಣವಂತೆ, ಕೊಪ್ಪ ತಾಲ್ಲೂಕು. |
| | 4 | ಶ್ರೀನಿವಾಸ ಬಿನ್ ಲೇಟ್ ಪುಟೇಗೌಡ, 69 ವರ್ಷ, ವಿಶ್ರಾಂತ PDO, ಹಾಲಿ ವ್ಯವಸಾಯ, ವಾಸ ತೀರ್ಥಹಳ್ಳಿ ರಸ್ತೆ, ಕೊಪ್ಪ ಕೋರ್ಟ್ ಹತ್ತಿರ, ಕೊಪ್ಪ ತಾಲ್ಲೂಕು. (**ಮೃತಪಟ್ಟಿರುತ್ತಾರೆ**.) |

× × × ×

**<u>ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ *313*ರ ಪ್ರಕಾರ ಆರೋಪಿತರ ಹೇಳಿಕೆಗಳು</u>**

ಪ್ರಃ1ಃ ಅಭಿಯೋಜನೆಯವರ ಸಾಕ್ಷಿದಾರರು ನಿಮ್ಮ ವಿರುದ್ದ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉಃ ಆ-1 ಹೌದು ಆ-2 ಹೌದು ಆ-3 ಹೌದು

ಪ್ರಃ2ಃಪ್ರಾಸಾ.1 ಶ್ರೀ ಗಂಗಶೆಟ್ಟಿ, ಎ.ಎಸ್.ಐ., ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 11-03-2022 ರಂದು ಅವರು ಠಾಣಾ ಎಸ ಹೆಚ್ ಒ ಕರ್ತವ್ಯದಲ್ಲಿರುವಾಗ ಸಂಜೆ 6-15 ಗಂಟೆ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊ. ಸಂಖ್ಯೆ 21/2022 ರಲ್ಲಿ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಅವರ ಮೇಲಾಧಿಕಾರಿಗಳಿಗೂ ಹಾಗೂ ನ್ಯಾಯಾಲಯಕ್ಕೂ ನಿವೇದಿಸಿಕೊಂಡು, ಅದೇ ದಿನ ಚಾಸಾ 1 ರವರನ್ನು ಪಿಸಿ 78 ರವರ ಮೂಲಕ ಕೊಪ್ಪದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಿ, ಅದೇ ದಿನ ಚಾಸಾ 1 ರವರಿಗೆ ನೋಟಿಸನ್ನು ನೀಡಿ ತನಿಖೆಗೆ ಹಾಜರಾಗಲು ತಿಳಿಸಿರುತ್ತಾರೆ, ದಿನಾಂಕ 12/03/2022 ರಂದು ಚಾಸಾ6 ರವರ

ಜೊತೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಅದೇ ಗ್ರಾಮದ ಚಾಸಾ 3 ಮತ್ತು 4 ರವರನ್ನು ಪಂಚರಾಗಿ ಬರಮಾಡಿಕೊಂಡು, ಆ ಸಮಯದಲ್ಲಿ ಚಾಸಾ 1 ರವರು ಕೃತ್ಯ ನಡೆದ ಸ್ಥಳವನ್ನು ಪಂಚರ ಸಮಕ್ಷಮದಲ್ಲಿ ತೋರಿಸಿದ ಮೇರೆಗೆ ಕೃತ್ಯ ನಡೆದ ಸ್ಥಳವನ್ನು ಪರಿಶೀಲಿಸಿ ಮಹಜರ್ ಕ್ರಮವನ್ನು ಸಂಜೆ 5-30 ರಿಂದ 6-30 ವರೆಗೂ ಜರುಗಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ ಆ-1 ಆ-2 ಆ-3

ಪ್ರಃ3ಃಪ್ರಾಸಾ.1 ರವರು ಪುನಃ ತಮ್ಮ ಸಾಕ್ಷ್ಯದಲ್ಲಿ ಆ ಸಮಯದಲ್ಲಿ ಚಾಸಾ 1 ರವರು ತೋರಿಸಿದ ಒಂದು ಕಾಡು ಜಾತಿಯ ಹಿಡಿ ಗಾತ್ರದ ಎರಡು ಅಡಿ ಉದ್ದದ ಮರದ ದೊಣ್ಣೆಯನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡು ಅದಕ್ಕೆ ಚೀಟಿಯನ್ನು ಅಂಟಿಸಿ, ಆ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿಕೊಂಡು ಭಾವಚಿತ್ರಗಳನ್ನು ತೆಗೆಸಿಕೊಂಡು, ನಂತರ ಠಾಣೆಗೆ ಬಂದು ವಶಕ್ಕೆ ಪಡೆದಿರುವ ಮುದ್ದೆ ಮಾಲನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 16/2022 ರಲ್ಲಿ ನಮೂದಿಸಿ ನ್ಯಾಯಾಲಯದಿಂದ ಅನಮತಿ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ ಆ-1 ಆ-2 ಆ-3

ಪ್ರಃ4ಃಪ್ರಾಸಾ.1 ರವರು ಪುನಃ ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ 1 ರವರ ಮುಂದುವರೆದ ಹೇಳಿಕೆ , ಚಾಸಾ 2 ರವರ ಹೇಳಿಕೆ ಪಡೆದಿರುತ್ತಾರೆ, ಅದೇ ದಿನ ಚಾಸಾ 6 ರವರಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಂ 65 ಬಿ ಎವಿಡೆನ್ಸ್ ಆಕ್ಟ್ ಅಡಿಯಲ್ಲಿ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತಾರೆ, ದಿನಾಂಕಃ 17/03/2022 ರಂದು 1 ರಿಂದ 4 ನೇ ಆರೋಪಿಗಳಾದ ನೀವು ಖುದ್ದಾಗಿ ಪೋಲಿಸ್ ಠಾಣೆಗೆ ಹಾಜರಾದ ಮೇರೆಗೆ ಅವರು ನಿಮ್ಮನ್ನು ವಿಚಾರಿಸಿ ಕಲಂ 41 ಎ ಸಿ ಆರ್ ಪಿ ಸಿ ಯಡಿಯಲ್ಲಿ ನೋಟಿಸನ್ನು ಜಾರಿ ಮಾಡಿ ನಿಮ್ಮಿಂದ ದಾಖಲಾತಿಗಳನ್ನು ಪಡೆದಿರುತ್ತಾರೆ, ದಿನಾಂಕ 14/04/2022 ರಂದು ಚಾಸಾ.1 ರವರಿಗೆ ಸ್ಥಳದ ದಾಖಲಾತಿಗಳನ್ನು ಹಾಜರುಪಡಿಸಲು ನೋಟಿಸನ್ನು ಜಾರಿ ಮಾಡಿರುತ್ತಾರೆ, ಅದೇ ದಿನ ಚಾಸಾ 5 ರವರಿಗೆ ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಕೋರಿ ಮನವಿ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ ಆ-1 ಆ-2 ಆ-3

ಪ್ರಃ5ಃಪ್ರಾಸಾ.1 ರವರು ಪುನಃ ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ21/05/2022 ರಂದು ಚಾಸ 5 ರವರಿಂದ ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ, ದಿನಾಂಕ 31/05/2022 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ ಶ್ರೀಮತಿ ರತ್ನಮ್ಮನವರು ತನ್ನ ಪರವಾಗಿ ನೀಡಿರುವ ಜಿಪಿಎ ಯನ್ನು ಹಾಜರುಪಡಿಸಿರುತ್ತಾರೆ, ದಿನಾಂಕಃ 26/07/2022 ರಂದು ಈ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ನಿಮ್ಮ ವಿರುದ್ಧ ಆರೋಪ

ಸಾಬೀತಾದ ಕಾರಣ ನ್ಯಾಯಾಲಯದಲ್ಲಿ ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ ಆ-1 ಸುಳ್ಳು ಆ-2 ಸುಳ್ಳು ಆ-3 ಸುಳ್ಳು

ಪ್ರ.6ಃ ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೆ?

ಉಃ ಆ-1 ಇಲ್ಲ ಆ-2 ಇಲ್ಲ ಆ-3 ಇಲ್ಲ

ಪ್ರಃ7ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೆ?

ಉಃ ಆ-1 ಇಲ್ಲ ಆ-2 ಇಲ್ಲ ಆ-3 ಇಲ್ಲ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 24/1/25

(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ) 24/1/25
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.

KPChandra
Rakesh KP
K.P. Shivappa